

## ಫೀದಲ್ ಕ್ಯಾಸ್ಟ್ರೊ

ಜನನ: ಆಗಸ್ಟ್ 13, 1926ರಲ್ಲಿ ಕ್ಯೂಬಾದ ಬಿರಾನ, ಹೋಲ್ಗವಿನ್ ಪ್ರಾಂತ. ಫಿಡೆಲ್ ಅಲೆಜಾಂಡ್ರೊ ಕ್ಯಾಸ್ಟ್ರೊ ರುಜ್ ಅವರ ಪೂರ್ಣ ಹೆಸರು. ಮೂಲತಃ ಕ್ಯಾಥೊಲಿಕ್. ನಂತರದಲ್ಲಿ ಅವರ ಕುಟುಂಬ ಸೆಕ್ಯುಲರ್ ಎಂದು ಹೇಳಿಕೊಂಡಿತು.

ಹವಾನಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು ವಕೀಲಿ ವೃತ್ತಿಯನ್ನೂ ಮಾಡಿದರು. ಕಮ್ಯುನಿಸ್ಟ್ ಪಾರ್ಟಿ ಆಫ್ ಕ್ಯೂಬಾ ಮೂಲಕ ರಾಜಕೀಯ ಪ್ರವೇಶ.

1959 ಫೆಬ್ರುವರಿಯಲ್ಲಿ ಪ್ರಧಾನಿ ಆಗಿ ಅಧಿಕಾರ. ಡಿಸೆಂಬರ್ 1976ರವರೆಗೆ ಅದೇ ಹುದ್ದೆ. ನಂತರ ಕೌನ್ಸಿಲ್ ಆಫ್ ಸ್ಟೇಟ್ ಆಫ್ ಕ್ಯೂಬಾದ ಅಧ್ಯಕ್ಷ. 2008 ಫೆಬ್ರುವರಿಯಲ್ಲಿ ನಿವೃತ್ತಿ ಘೋಷಣೆ.

ಹವಾನಾ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ರಾಜಕೀಯ ಚಟುವಟಿಕೆಗಳು ಆರಂಭಗೊಂಡಿದ್ದು. ಫುಲ್ಗೇನಿಯಾ ಬಟಿಸ್ಟಾ ವಿರುದ್ಧ ರಾಜಕೀಯ ಹೋರಾಟ ಆರಂಭಿಸುವ ಮೂಲಕ ಗಮನ ಸೆಳೆದ ಕ್ಯಾಸ್ಟ್ರೊ, ಅಮೆರಿಕದ ಕಾರ್ಪೊರೇಟ್ ಮನಸ್ಥಿತಿ ಕ್ಯೂಬಾಕ್ಕೆ ಹಬ್ಬಿದ್ದನ್ನು ವಿರೋಧಿಸಿದರು.

1953ರಲ್ಲಿ ಒಂದು ವಿಫಲ ದಾಳಿಗೆ ಜೈಲು ಸೇರಿದರು. ಮೆಕ್ಸಿಕೊಗೆ ಪಯಣ ಬೆಳೆಸಿ ತಮ್ಮ ಸಹಚರರೊಂದಿಗೆ ಬಟಿಸ್ಟಾ ಸಾಮ್ರಾಜ್ಯದ ಕ್ಯೂಬಾದಲ್ಲಿ ದಾಳಿ ಸಂಘಟಿಸಲು ಕೆಲವರನ್ನು ತರಬೇತುಗೊಳಿಸಿದರು. ಡಿಸೆಂಬರ್ 1956ರಲ್ಲಿ ಮೆಕ್ಸಿಕೊ ತೊರೆದು ಪೂರ್ವ ಕ್ಯೂಬಾಗೆ ಬಂದರು. ಅಮೆರಿಕ ಬೆಂಬಲದಿಂದ ಸರ್ವಾಧಿಕಾರ ನಡೆಸುತ್ತಿದ್ದ ಬಟಿಸ್ಟಾ ಸರ್ಕಾರ ಕಿತ್ತೊಗೆದು ಕ್ಯಾಸ್ಟ್ರೊ ಹೊಸ ಸರ್ಕಾರ ರಚಿಸಿ ತಾವೇ ಪ್ರಧಾನಿಯಾದರು. 1976ರಲ್ಲಿ ಕೌನ್ಸಿಲ್ ಆಫ್ ಸ್ಟೇಟ್ ಆಫ್ ಕ್ಯೂಬಾದ ಅಧ್ಯಕ್ಷರಾದರು.

ಕರುಳಿಗೆ ಆದ ಶಸ್ತ್ರ ಚಿಕಿತ್ಸೆಯಿಂದ ನರಳುತ್ತಿದ್ದ ಕ್ಯಾಸ್ಟ್ರೊ ಹಾಸಿಗೆ ಹಿಡಿಯುವಂತಾಯಿತು. ಫೆಬ್ರುವರಿ 2008ರಂದು ಅಧ್ಯಕ್ಷ ಹುದ್ದೆ ತೊರೆದು ನಿವೃತ್ತಿ ಘೋಷಿಸಿದರು. 2016, ನವೆಂಬರ್‌ನಲ್ಲಿ ನಿಧನರಾದರು.

ಬಯಲಾಯಿತು. ಕೊನೆಗೆ ಕ್ಯಾಸ್ಟ್ರೊ ಸರ್ಕಾರವನ್ನು ಕಿತ್ತೊಗೆಯಲು ಅಮೆರಿಕ ಸರ್ಕಾರ ಆಪರೇಷನ್ ಮಂಗೂಸ್ ಎಂಬ ಕಾರ್ಯಾಚರಣೆಯನ್ನು ನಡೆಸಿದರೂ ಯಶಸ್ಸು ಸಿಗಲಿಲ್ಲ!

ಅಮೆರಿಕದ ಮಿಲಿಟರಿ ತಂತ್ರಗಳನ್ನು ಎದುರಿಸಲು 'ರೆವಲ್ಯುಷನರಿ ಡಿಫೆನ್ಸ್ ಕಮ್ಯುನಿಟಿ' ಎನ್ನುವುದು ಕ್ಯಾಸ್ಟ್ರೊ ಅವರ ಮೊದಲ ಮಹತ್ವದ ಹೆಜ್ಜೆ. ಕ್ಯೂಬಾದ ಗಲ್ಲಿ ಗಲ್ಲಿಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸುತ್ತ ಜನತೆಯೊಂದಿಗೆ ನಿಕಟ ಸಂಬಂಧ ಸಾಧಿಸುವುದು ಮತ್ತು ಅಮೆರಿಕ ವಿರೋಧಿ ನಿಲುವಿಗೆ ಪೂರಕವಾಗಿ ದೇಶವನ್ನು ಒಗ್ಗೂಡಿಸುವುದು ಇದರ ಕರ್ತವ್ಯವಾಗಿತ್ತು.

ಕ್ಯಾಸ್ಟ್ರೊ ನೇತೃತ್ವದಲ್ಲಿ ಕ್ಯೂಬಾ ಸ್ವಾವಲಂಬಿ ಆದ ನಂತರವೂ ದೇಶಕ್ಕೆ ಸಾಕಷ್ಟು ಸವಾಲುಗಳಿದ್ದವು. ಮುಖ್ಯವಾಗಿ ಮಾರ್ಕ್ಸ್ ಮತ್ತು ಲೆನಿನ್‌ವಾದ ಕ್ಯೂಬಾದಲ್ಲಿ ಆಂತರಿಕ ಬಿಕ್ಕಟ್ಟನ್ನು ಸೃಷ್ಟಿಸಿತ್ತು. ಅಮೆರಿಕ ಮತ್ತು ರಷ್ಯಾ ನಡುವಿನ ಶೀತಲ ಸಮರಕ್ಕೆ ಕ್ಯೂಬಾದ ಒಂದು ಭಾಗ ಪರೋಕ್ಷ ಬೆಂಬಲವಾಗಿ ನಿಂತರೆ ಇದನ್ನು ವಿರೋಧಿಸುವ ಕೆಲವರು ಕ್ಯಾಸ್ಟ್ರೊ ವಿರೋಧಿ ಬಣವಾಗಿ ರಾಷ್ಟ್ರವನ್ನೇ ತೊರೆಯುವ ನಿರ್ಧಾರ ಕೈಗೊಂಡಿದ್ದರು.

### ಸೋವಿಯತ್ ಜತೆಗಿನ ನಂಟು

1962ರಲ್ಲಿ ಕ್ಯೂಬಾದಲ್ಲಿ ಕ್ಷಿಪಣಿ ಬಿಕ್ಕಟ್ಟು ಉಲ್ಬಣಗೊಂಡಿತು. ಇದು ಕ್ಯಾಸ್ಟ್ರೊ ಅವರನ್ನು ಸೋವಿಯತ್ ಒಕ್ಕೂಟದ ಮೊರೆ ಹೋಗುವಂತೆ ಮಾಡಿತು. ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕ್ಯಾಸ್ಟ್ರೊ ಯತ್ನ ಅಮೆರಿಕದ ಬಹುಪಾಲು ಪ್ರದೇಶವನ್ನು ಖಂಡಾಂತರ ಕ್ಷಿಪಣಿಯ ಗುರಿಯಾಗಿರಿಸಿಕೊಳ್ಳುವುದೂ ಆಗಿತ್ತು. ಸೋವಿಯತ್ ಒಕ್ಕೂಟ ಹಾಗೂ ಕ್ಯೂಬಾದ ಈ ಕ್ರಮ ಅಮೆರಿಕಕ್ಕೆ ಅಪಾಯಕಾರಿ ಆಗಿತ್ತು. ಇದು ಅಮೆರಿಕ ಮತ್ತು ಸೋವಿಯತ್ ನಡುವಣ ಯುದ್ಧಕ್ಕೆ ಕಾರಣವಾಗುವ ಅಪಾಯ ತಂದೊಡ್ಡಿತು. ಉಭಯ ರಾಷ್ಟ್ರಗಳು ಪರಸ್ಪರ ರಾಜಿ ಮಾಡಿಕೊಳ್ಳಲು ಮುಂದಾದವು. ಸೋವಿಯತ್ ಒಕ್ಕೂಟ ತನ್ನ ಎಲ್ಲ ಖಂಡಾಂತರ ಕ್ಷಿಪಣಿಗಳನ್ನು (ಇಂಟರ್‌ಕಾಂಟಿನೆಂಟಲ್ ಬ್ಯಾಲೆಸ್ಟಿಕ್ ಮಿಸ್ಸೈಲ್) ಕ್ಯೂಬಾದಿಂದ ವಾಪಸ್ ಪಡೆಯುವ ಷರತ್ತಿಗೆ ಒಪ್ಪಿಕೊಂಡಿತು. ಅಮೆರಿಕ ಕೂಡ ಕ್ಯೂಬಾದ ಸುದ್ದಿಗೆ ಹೋಗುವುದಿಲ್ಲ ಎಂದು ಭಾಷೆ ನೀಡಿತು.ಈ ಬೆಳವಣಿಗೆ ಕ್ಯಾಸ್ಟ್ರೊ ಗಮನಕ್ಕೂ ಬಾರದೇ ನಡೆಯಿತಲ್ಲದೇ ಅವರನ್ನು ಒಟ್ಟಾರೆ ಈ ಯತ್ನದಲ್ಲಿ ಭಾಗಿಯಾಗಿಸಿ-ಕೊಳ್ಳಲಿಲ್ಲ. ಇದು ಅವರಲ್ಲಿ ಅಸಮಾಧಾನಕ್ಕೆ ಕಾರಣವಾಯಿತಾದರೂ ಅಮೆರಿಕ ಸೇನೆಯ ಬೆದರಿಕೆಯಿಂದ ಕ್ಯೂಬಾ ಸಂಪೂರ್ಣ ಹೊರ ಬರುವಂತಾಯಿತು. ನಂತರ ಕ್ಯಾಸ್ಟ್ರೊ ದೇಶದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳಲ್ಲಿ ಬದಲಾವಣೆಗಳಿಗೆ ಒತ್ತು ಕೊಡಲಾರಂಭಿಸಿದರು. ಅಮೆರಿಕದ ಜತೆ ಸೈದ್ಧಾಂತಿಕ ಜಗಳವನ್ನೂ ಮುಂದುವರಿಸಿದರು. ಜಗತ್ತಿನ ಎಲ್ಲೆಡೆ ಇರುವ ಕ್ರಾಂತಿಕಾರಿ ಸಂಘಟನೆಗಳೊಂದಿಗೆ ಸಖ್ಯ ಬೆಳೆಸುತ್ತಲೇ ಸಾಗಿದರು. ನೋಡ ನೋಡುತ್ತಲೇ ಅಂತರರಾಷ್ಟ್ರೀಯ ನಾಯಕರಾದರು.

1989ರಲ್ಲಿ ಎರಡು ಘಟನೆಗಳು ಕ್ಯಾಸ್ಟ್ರೊ ಅವರನ್ನು ಕಂಗೆಡಿಸಿದವು. ಅಂಗೋಲಾ ಜನಾಂಗಿಕ ಯುದ್ಧದ ಸಂದರ್ಭದಲ್ಲಿ ಮತ್ತು ಕ್ಯುಬಾಗೆ ಜಯ ತಂದುಕೊಡುವಲ್ಲಿ ಮಹತ್ತರ ಕೊಡುಗೆ ನೀಡಿದ ಜನರಲ್ ಒಚೊಯ್ ಸಾಂಚೇಜ್ ಪಿಗ್ಸ್ ಕೊಲ್ಲಿಯ ಹೀರೊ ಡ್ರಗ್ಸ್ ಪ್ರಕರಣದಲ್ಲಿ ಬಂಧಿತರಾಗಿ ನೇಣಿಗೆ ಕೊರಳೊಡ್ಡುವಂತಾಗಿದ್ದು ಕ್ಯಾಸ್ಟ್ರೊ ಪ್ರತಿಷ್ಠೆಗೆ ಮತ್ತು ಶಕ್ತಿಗೆ ಬಿದ್ದ ದೊಡ್ಡ ಏಟಾಗಿತ್ತು. ಅದೇ ಸಮಯಕ್ಕೆ ಸೋವಿಯತ್ ಒಕ್ಕೂಟ ಛಿದ್ರಗೊಂಡು ಕ್ಯೂಬಾದ ಆರ್ಥಿಕ ಸಂಕಷ್ಟಕ್ಕೆ ಕಾರಣವಾಯಿತು. ಈ ಸಮಯದಲ್ಲಿ ಜನತೆ-ಯನ್ನು ಸಂತೈಸಿ ದೇಶದ ಏಕತೆಗಾಗಿ ಕೈಗೊಂಡ ಕ್ಯಾಸ್ಟ್ರೊ ಕ್ರಮಗಳು ಅವಿಸ್ಮರಣೀಯ.

### ಅಮೆರಿಕದ ಜತೆ ಕ್ಯೂಬಾ

2002ರ ಮೇ ತಿಂಗಳಿನಲ್ಲಿ ಕ್ಯಾಸ್ಟ್ರೊ ಆಮಂತ್ರಣದ ಮೇರೆಗೆ ಅಮೆರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ಕ್ಯೂಬಾಗೆ ಭೇಟಿ ನೀಡಿದರು. 1959ರ ನಂತರ ಅಮೆರಿಕದ ಅಧ್ಯಕ್ಷರೊಬ್ಬರು ಕ್ಯೂಬಾಗೆ ಭೇಟಿ ನೀಡಿದ್ದು ಇದೇ ಮೊದಲು. ಅಮೆರಿಕ ಹೇರಿದ್ದ ದಿಗ್ಬಂಧನಗಳನ್ನು ಸಡಿಲಿಸುವ ಪರೋಕ್ಷ ಮನವಿ ಕ್ಯೂಬಾದ್ದಾಗಿತ್ತು. ಕ್ಯುಬಾ ಮತ್ತು ಅಮೆರಿಕ ಸಂಬಂಧಗಳ ವಿಷಯದಲ್ಲಿ ಅಡ್ಡಗೋಡೆ ಮೇಲೆ ದೀಪ ಇಡುವ ಹಾಗೆ ಕಾರ್ಟರ್ ಮಾತನಾಡಿದರು. ಕಾರ್ಟರ್ ಭೇಟಿ ಫಲ ನೀಡಲಿಲ್ಲ.

ಬುಷ್ ತೀಕ್ಷ್ಣ ಪ್ರತಿಕ್ರಿಯಿಸುತ್ತ ಕ್ಯುಬಾದಲ್ಲಿ ಪ್ರಜಾಪ್ರಭುತ್ವ ನೆಲೆಗೊಳ್ಳುವ-ತನಕ ದಿಗ್ಬಂಧನ ಹಿಂತೆಗೆಯಲಾಗದು ಎಂದರು. 2004ರಲ್ಲಿ ಉಭಯ ರಾಷ್ಟ್ರಗಳ ನಡುವಿನ ಸಂಚಾರದ ಎಲ್ಲ ಅವಕಾಶಗಳನ್ನೂ ಮೊಟಕುಗೊಳಿಸಿ-ದರು. ಕ್ಯೂಬಾದಲ್ಲಿ ನೆಲೆಸಿದ ಅಮೆರಿಕನ್ನರು ಮತ್ತು ಅಮೆರಿಕದಲ್ಲಿ ನೆಲೆಸಿದ ಕ್ಯುಬಾ ಮೂಲದವರು ಪರಸ್ಪರ ಭೇಟಿ ಆಗುವ ಒಂದು ಸಣ್ಣ ವ್ಯವಸ್ಥೆಗೂ ಕಲ್ಲು ಹಾಕಿದರು. ಸಾಂಪ್ರದಾಯಿಕ ವೈರತ್ವ ಮುಂದುವರಿಯಿತು.

ನಿರಂತರ ಹೋರಾಟದ ಹಾದಿಯಲ್ಲಿ ದಣಿದಿದ್ದ ಕ್ಯಾಸ್ಟ್ರೊ 2008ರಲ್ಲಿ ಅಧಿಕಾರದಿಂದ ಕೆಳಗಿಳಿಯುವ ನಿರ್ಧಾರ ಪ್ರಕಟಿಸಿದರು. ಆದರೆ, ಹೋರಾಟದ ನೇತೃತ್ವವನ್ನು ತಮ್ಮ ಸಹೋದರನಿಗೇ ಒಪ್ಪಿಸುವ ಮೂಲಕ ಅವರು ಸ್ವಾರ್ಥಿ-ಯಾದರೇನೋ ಅನಿಸಿತು. ಅವರ ಸಹೋದರ ಕ್ರಾಂತಿಕಾರಿ ಅನ್ನುವುದು ಬೇರೆ ವಿಚಾರ. ಮನುಷ್ಯ ಸಹಜ ರಾಗ, ದ್ವೇಷ, ಅಭಿಲಾಷೆ, ಪಕ್ಷಪಾತತನ ಬದಿಗಿಟ್ಟು ಭಿನ್ನ ಮೌಲ್ಯಗಳ ಬೆಳೆಸುವ ಸವಾಲಿನ ಸಂದರ್ಭವನ್ನು ಕ್ಯಾಸ್ಟ್ರೊ ಸಮರ್ಥವಾಗಿ ಎದುರಿಸುವಲ್ಲಿ ಸೋತರೇನೋ. ಕ್ಯೂಬಾ ಜನತೆಯನ್ನು ಹೋರಾಟಕ್ಕೆ ಬಳಸಿ-ಕೊಂಡ ಕ್ಯಾಸ್ಟ್ರೊ ಗುರಿಯನ್ನೇನೋ ಸಾಧಿಸಿದರು. ಆದರೆ, ಹೋರಾಟಕ್ಕೆ ಸಂದ ಜಯದ ಎಲ್ಲ ಹಂತಗಳಲ್ಲಿ ಇತರರಿಗೂ ಅವಕಾಶ ನೀಡದೇ ಯಜಮಾನಿಕೆ-ಯನ್ನು ಉಳಿಸಿಕೊಳ್ಳುವುದಕ್ಕೆ ಮಹತ್ವ ಕೊಟ್ಟರೇನೋ ಎನ್ನುವ ಅಸಮಧಾನ ಬಹುಶಃ ಎಲ್ಲರನ್ನು ಕಾಡುವಂಥದ್ದೇ. ಇದೆಲ್ಲದರ ಹೊರತಾಗಿಯೂ ಸಾಮ್ರಾಜ್ಯಶಾಹಿ ಮತ್ತು ಸರ್ವಾಧಿಕಾರಿ ಕಪಿಮುಷ್ಟಿಯಿಂದ ಕ್ಯೂಬಾ ಮುಕ್ತ-ಗೊಳಿಸಿದ ಕ್ಯಾಸ್ಟ್ರೊ ಜಗದ ದೊಡ್ಡ ಹೀರೋ. ನಿಮಗಿದೋ ಕೊನೆಯ ಲಾಲ್ ಸಲಾಂ.